**GOVERNMENT OF KARNATAKA**

**KARNATAKA LOKAYUKTA**

NO.UPLOK-1/DE/1092/2017/ARE-16
(Encl: (a) Recommendation of Hon'ble Upalokayukta&Inquiry Report of Inq.Officer, in original
(b) Connected records

Multi Storied Building,
Dr. B.R. AmbedkarVeedhi,
Bengaluru – 560 001
Date: 04/02/2021

**/CONFIDENTIAL/**

To,

Dr.J. Ravishankar, IAS
Secretary to Government,
(Municipalities & UDAs)
Urban Development Department,
Vikasa Soudha, Bengaluru 560 001.

**Respected Sir,**

Sub:- Departmental inquiry against;

1) Sri Khaza Sadruddin, the then Junior Engineer, (PRD), Town Municipal Council, Wadi, Chitapur Taluk, Kalaburagi District- Presently working at Public Works Department, Kalaburagi Sub Division, Kalaburagi;

2) Sri Siddappa Somapur, the then Junior Engineer, Town Municipal Council, Wadi Chitapur Taluk, Kalaburagi District – Presently working at Town Municipal Council, Shahbad;

3) Sri Ramesh Pattedar, Chief Officer, Town Municipal Council, Wadi, Chitapur Taluk, Kalaburagi District;

4) Sri T.B. Kumara Naik, then Chief Officer, Town municipal Coundil, Wadi-Presently working at Town Municipal Council, Nanjanagud;

5) Sri Ashok R. Kalal, the then Assistant Executive Engineer – Presently working at District Urban Development Cell, Kalaburagi District; Kalaburagi;

6) Sri S.P. Viraktamath, the then Executive Engineer – Presently working at District Urban

Development Cell, Uttara Kannada District, Karwar-Reg.

Ref:-

1) Government Order No. ನಅಇ 95 ಡಿಎಂಕೆ 2016, Bangaluru dated 28/09/2017

2) Inquiry Report dated: 27/01/2021 Of Additional Registrar of Enquiries-16, Karnataka Lokayukta, Bengaluru

3) Recommendation dated: 01/02/2021 of Hon'ble Upalokayukta-1, State of Karnataka, Bengaluru.

*****

Adverting to the above, I am directed to forward herewith the Recommendations of the Hon'ble Upalokayukta-I, State of Karnataka, Bengaluru, dated 01/02/2021 in original, and the Report of the Inquiry Officer, in original, along with relevant records of inquiry, as detailed below:

**INDEX**

| Sl. No. | Particulars of Documents | Page Nos. |
|---|---|---|
| | One Sealed cover containing the recommendation dated 01/02/2021 of Hon'ble Upalokayukta-1, and inquiry report dated 27/01/2021in originals. | |
| File 1 | Order Sheet File (Original) | 1-21 |
| File 2 | Documents containing : | |
| | I. 12(3) report of Hon'ble Upalokayukta-1 dated:19/07/2016. (xerox) | 22-25 |
| | II. Government Order No. NaAaE 95 DMK 2016 Bengaluru dated 28.09.2017 (xerox) | 26-27 |
| | III. Nomination order No: Uplok-1/DE/1092/2017 of Hon'ble Upalokayukta-1, Bangalore dated: 13/11/2017. (xerox) | 28-29 |
| | IV. Served Articles of Charges dt.29/11/2018 along with covering letter of Police Inspector, Lokayukta, Kalburgi (30 Xerox 31 to 37 Original) | 30-37 |
| | V. First Oral Statement of DGO 1 to 6 (original) | 38-43 |
| | VI. Joint Defense statement of DGOs 1 to 6 dtd. 04.05.2019 filed by Advocate for DGOs (Original) | 44-50 |
| | VII. Second Oral Statement of DGOs 1 to 6 dated 16/01/2020 (original) | 51-56 |
| | VII. Joint Written Arguement of DGOs 1 to 6 Dated 29.12.2020 filed by Advocate for DGOs. (original) | 57-66 |
| File 3 | Witness examined on behalf of the Disciplinary | |

2 to 4

| | | |
|---|---|---|
| | Authority | |
| | PW-1: Smt. Siddupanchala, (Complainant) (Original) | 67-71 |
| | PW-2: Sri. M. Deviprasad (Retired Executive Engineer, Lokayukta, TAC, Bengaluru) (Investigation Officer) (Original) | 72-79 |
| File 4 | Documents marked on behalf Disciplinary Authority (Ex.P1 to P.10) | |
| | Ex.P-1: Complaint of complainant dated 06/05/2012 (original) | 80-81 |
| | Ex.P-2: Form No. I (complaint) dated 06/05/2012. (original) | 82-85 |
| | Ex.P-3 : Form No.2 (Affidavit) dated 06/05/2012. (original) | 86 |
| | Ex.P-4: Complainant submitted information obtained under RTI at the time of submitting complaint (Xerox) | 87-231 |
| | Ex.P-5: 7 photos (Original) | 232-238 |
| | Ex.P-6: Spot Mahazar of I.O. & C.D. dated 22/04/2014 (Original) | 239-248 |
| | Ex. P-7: Another Spot Mahazar of I.O. dated 23/04/2014 (Original) | 249-253 |
| | Ex.P-8: Rejoinder of the complainant dated 18/12/2014 (Original) | 254 |
| | Ex.P-9: Along with Rejoinder 2 cuttings of daily news paper (Xerox) | 255-256 |
| | Ex.P-10: C.D. | 257 |
| | Ex.P-11: Investigation Report of I.O. dated 16/07/2014 (14 sheets) (Original) | 258-271 |
| | Ex.P-12: Detail statement of development works in SFC-2012-13 (6 sheets) (Original) | 272-278 |
| | Ex.P-13: Grants list sanctioned to the said 2 works by the Deputy Commission, Kalburagi. (Xerox) | 279-280 |
| | Ex.P-14: Estimate for the 2nd work for construction of main drain ( 4 sheets) (Xerox) | 281-284 |
| | Ex.P-15: As per direction of DC, Gulbarga, Chief Officer issued approval order dated 11.07.2011 (3 sheets) (Xerox) | 285-288 |
| | Ex.P-16: For 1st works having paid the bill (29 sheets) (Xerox) | 289-326 |
| | Ex.P-17: For 2nd works having paid the bill (24 sheets) (Xerox) | 327-355 |
| | Ex.P-18: Construction of CC Drain connected documents and CD (82 pages & 1 CD) (Xerox) | 356-438 |
| File 5 | Witness examined on behalf of the DGOs 1 to 6 | |
| | DW-1: Sri. Khaja Sabrudin (DGO-1) (Original) | 439-449 |
| | DW-2: Sri. Siddappa Somapura, (DGO-2) (Original) | 450-457 |
| | DW-3: Sri. Ramesh Pattedar, (DGO-3) (Original) | 458-465 |

| | | |
|---|---|---|
| | DW-4: Sri. Kumar Naik (DGO-4) (Original) | 466-473 |
| | DW-5: Sri. Ashok R Kalal (DGO-5) (Original) | 474-482 |
| | DW-6: Sri. S.P. Virakthimutt (DGO-6) (Original) | 483-491 |
| File 6 | Documents marked on behalf of the DGOs 1 to 3 | |
| | Ex. D-1 : Comments dated 14/01/2016 of DGO-4 submitted to DRE-3 (Original) | 492-493 |
| | Ex. D-2 : Along with comments of DGO-4 he submitted Office Note ( 8 sheets) (Xerox) | 494-509 |
| | Ex. D-3: For another work DGO-4 submitted Office Note ( 5 sheets) (Xerox) | 510-519 |

Receipt of the Recommendation of the Hon'ble Upalokayukta-I, along with the Report of the Inquiry Officer in a sealed cover and the connected inquiry records, as mentioned above, may please be acknowledged, at the earliest.

Yours faithfully,

**(USHARANI)**
Registrar,
Karnataka Lokayukta,
Bengaluru

Copy to
Addl. Registrar of Enquiries -16, Karnataka Lokayukta, Bengaluru along with copy of recommendation, for information and further necessary action.

**GOVERNMENT OF KARNATAKA**

**KARNATAKA LOKAYUKTA**

No. UPLOK-1/DE/1092/2017/ARE-16

Multi Storied Building,
Dr. B.R. Ambedkar Veedhi,
Bengaluru-560 001
Date: **01/02/2021**

**RECOMMENDATION**

Sub:- Departmental inquiry against;

1) Sri Khaza Sadruddin, the then Junior Engineer, (PRD), Town Municipal Council, Wadi, Chitapur Taluk, Kalaburagi District – Presently working at Public Works Department, Kalaburagi Sub Division, Kalaburagi;
2) Sri Siddappa Somapur, the then Junior Engineer, Town Municipal Council, Wadi, Chitapur Taluk, Kalaburagi District – Presently working at Town Municipal Council, Shahbad;
3) Sri Ramesh Pattedar, Chief Officer, Town Municipal Council, Wadi, Chitapur Taluk, Kalaburagi District;
4) Sri T.B. Kumara Naik, then Chief Officer, Town Municipal Council, Wadi – Presently working at Town Municipal Council, Nanjanagud;
5) Sri Ashok R. Kalal, the then Assistant Executive Engineer – Presently working at District Urban Development Cell, Kalaburagi District, Kalaburagi;
6) Sri S.P. Viraktamath, the then Executive Engineer – presently working at District Urban Development Cell, Uttara Kannada District, Karwar – Reg.

Ref:- 1) Govt. Order No.ನಅಇ 95 ಡಿಎಂಕೆ 2016, Bengaluru dated 28/9/2017.

2) Nomination order No. UPLOK-1/DE/1092/2017, Bengaluru dated 13/11/2017 of Upalokayukta-1, State of Karnataka, Bengaluru

3) Inquiry Report dated 27/01/2021of Additional Registrar of Enquiries-16, Karnataka Lokayukta, Bengaluru

----

The Government by its order dated 28/9/2017 initiated the disciplinary proceedings against (1) Sri Khaza Sadruddin, the then

Junior Engineer, (PRD), Town Municipal Council, Wadi, Chitapur Taluk, Kalaburagi District – Presently working at Public Works Department, Kalaburagi Sub Division, Kalaburagi; (2) Sri Siddappa Somapur, the then Junior Engineer, Town Municipal Council, Wadi Chitapur Taluk, Kalaburagi District – Presently working at Town Municipal Council, Shahbad; (3) Sri Ramesh Pattedar, Chief Officer, Town Municipal Council, Wadi, Chitapur Taluk, Kalaburagi District; (4) Sri T.B. Kumara Naik, then Chief Officer, Town Municipal Council, Wadi – Presently working at Town Municipal Council, Nanjanagud; (5) Sri Ashok R. Kalal, the then Assistant Executive Engineer – Presently working at District Urban Development Cell, Kalaburagi District, Kalaburagi; (6) Sri S.P. Viraktamath, the then Executive Engineer – presently working at District Urban Development Cell, Uttara Kannada District, Karwar (hereinafter referred to as Delinquent Government Officials 1 to 6, for short as DGO-1, DGO-2, DGO-3, DGO-4, DGO-5 and DGO-6 respectively) and entrusted the Departmental Inquiry to this Institution.

2. This Institution by Nomination Order No.UPLOK-1/DE/1092/ 2017, Bengaluru dated 13/11/2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 to 6 for the alleged charge of misconduct, said to have been committed by them. Subsequently, by Order No. UPLOK-1&2/DE/Transfers/2019, dated 7/2/2019, the Additional Registrar of Enquiries-16, Karnataka Lokayukta, Bengaluru was re-nominated as inquiry officer to conduct departmental inquiry against DGOs 1 to 6. .

3. The DGO-1 Sri Khaza Sadruddin, the then Junior Engineer, (PRD); DGO-2 Sri Siddappa Somapur, the then Junior Engineer; DGO-3 Sri Ramesh Pattedar, Chief Officer; DGO-4 Sri T.B. Kumara Naik, then Chief Officer; DGO-5 Sri Ashok R. Kalal, the then Assistant Executive Engineer; and DGO-6 Sri S.P. Viraktamath, the then Executive Engineer – of Town Municipal Council, Wadi, Chitapur Taluk, Kalaburagi District were tried for the following charge:-

"ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಖಾಜಾ ಸಬ್ರುದ್ದೀನ್ ಆದ ನೀವು ವಾಡಿಯ ಪುರಸಭೆಯಲ್ಲಿ ಕಿರಿಯ ಅಭಿಯಂತರರಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರ ಸಿದ್ದಪ್ಪ ಸೋಮಪುರ ಆದ ನೀವು ಕಿರಿಯ ಅಭಿಯಂತರರಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರ ರಮೇಶ್ ಪತ್ತೇದಾರ್‌ಆದ ನೀವು ವಾಡಿಯ ಪುರಸಭೆಯಲ್ಲಿ ಮುಖ್ಯಾಧಿಕಾರಿ, ಕುಮಾರ ನಾಯಕರ್ ಆದ ನೀವು ವಾಡಿಯ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರ ಅಶೋಕ ಆರ್. ಕಲಾಲ ಆದ ನೀವು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಹಾಗೂ ಐದನೆಯ ಆಪಾದಿತ ಸರ್ಕಾರಿ ನೌಕರ ಎಸ್.ಪಿ. ವಿರಕ್ತಿಮಠ ಆದ ನೀವು ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವದಿಯಲ್ಲಿ 240 ಮೀಟರ್‌ನಿಂದ 270 ಮೀಟರ್‌ವರೆಗೆ ಚರಂಡಿ ಕಾಮಗಾರಿಯನ್ನು ರೂ.48,492/-ಗಳಿಗೆ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಬರುವ ಶಿವಾಜಿ ಚೌಕದ ಬಳಿ 40 ಮೀಟರ್‌ಗಳ ಚರಂಡಿ ಕಾಮಗಾರಿಯನ್ನು ರೂ.24,141/-ಗಳಿಗೆ ನಿರ್ವಹಿಸಿದ್ದು, ಸದರಿ ಕಾಮಗಾರಿಗೆ ಕಾಂಕ್ರೀಟ್ ಬಳಸಿರುವುದು ತೃಪ್ತಿಕರವಾಗಿಲ್ಲದಿರುವುದು ಕಂಡುಬಂದಿದ್ದು, ಮೇಲ್ಕಾಣಿಸಿದ ಆರ್ಥಿಕ ನಷ್ಟಕ್ಕೆ ನೀವುಗಳು ಜವಾಬ್ದಾರರಾಗಿದ್ದು, ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held

that the Disciplinary Authority has proved the above charge against DGO-1 Sri Khaza Sadruddin, the then Junior Engineer, (PRD); DGO-2 Sri Siddappa Somapur, the then Junior Engineer; DGO-3 Sri Ramesh Pattedar, Chief Officer; DGO-4 Sri T.B. Kumara Naik, then Chief Officer; DGO-5 Sri Ashok R. Kalal, the then Assistant Executive Engineer; and DGO-6 Sri S.P. Viraktamath, the then Executive Engineer – of Town Municipal Council, Wadi, Chitapur Taluk, Kalaburagi District.

5. On re-consideration of inquiry report and totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. The Inquiry officer has held that DGO-1 Sri Khaza Sadruddin, the then Junior Engineer, (PRD) is responsible for causing wasteful expenditure of Rs.4,829/-; DGO-2 Sri Siddappa Somapur, the then Junior Engineer is responsible for causing wasteful expenditure of Rs.9,700/-; DGO-3 Sri Ramesh Pattedar, Chief Officer is responsible for causing wasteful expenditure of Rs.14,526/-; DGO-4 Sri T.B. Kumara Naik, then Chief Officer is responsible for causing wasteful expenditure of Rs.14,526/-; DGO-5 Sri Ashok R. Kalal, the then Assistant Executive Engineer is responsible for causing wasteful expenditure of Rs.14,526/-; and DGO-6 Sri S.P. Viraktamath, the then Executive Engineer is responsible for causing wasteful expenditure of Rs.14,526/- to the State exchequer.

7. As per the First Oral Statement submitted by DGOs 1 to 6;

(i) DGO-1 Sri Khaza Sadruddin is due to retire from service on 29/2/2024;

(ii) DGO-2 Sri Siddappa Somapur is due to retire from service on 31/5/2026;

(iii) DGO-3 Sri Ramesh Pattedar is due to retire from service on 30/4/2025;

(iv) DGO-4 Sri T.B. Kumara Naik, is due to retire from service on 31/5/2026;

(v) DGO-5 Sri Ashok R. Kalal is due to retire from service on 30/4/2021;

(vi) DGO-6 Sri S.P. Virakthamath is due to retire from service on 30/6/2024

8. Having regard to the nature of charge proved against DGO-1 Sri Khaza Sadruddin, the then Junior Engineer, (PRD), who is found to have caused wasteful expenditure to the tune of Rs.4,829/-, by recommending the recovery of the said amount out of his salary and other allowances, it is further recommended that he shall be imposed with penalty of withholding one annual increment with cumulative effect.

9. Having regard to the nature of charge proved against DGO-2 Sri Siddappa Somapur, the then Junior Engineer who is found to have caused wasteful expenditure to the tune of Rs.9,700/-, by recommending the recovery of the said amount out of his salary and other allowances, it is further recommended that he shall be imposed with penalty of withholding two annual increments with cumulative effect;

10. Having regard to the nature of charge proved against DGO-3 Sri Ramesh Pattedar, the then Chief Officer, Town Municipal Council, Wadi, who is found to have caused wasteful expenditure

to the tune of Rs.14,526/-, by recommending the recovery of the said amount out of his salary and other allowances, it is further recommended that he shall be imposed with penalty of withholding two annual increments with cumulative effect.

11. Having regard to the nature of charge proved against DGO-4 Sri Kumara Naik, the then Chief Officer, Town Municipal Council, Wadi, who is found to have caused wasteful expenditure to the tune of Rs.14,526/-, by recommending the recovery of the said amount out of his salary and other allowances, it is further recommended that he shall be imposed with penalty of withholding two annual increments with cumulative effect.

12. Having regard to the nature of charge proved against DGO-5 Sri Ashok R. Kalal, the then Assistant Executive Engineer, who is found to have caused wasteful expenditure to the tune of Rs.14,526/-, since he is going to retire from service on 30/4/2021, withholding of increments with cumulative effect will not be a recourse to be adopted, because the said penalty cannot be implemented. Hence, by recommending the recovery of a sum of Rs.14,526/- from the pensionary benefits payable to DGO-5 Sri Ashok R. Kalal, it is further recommended that he shall be imposed with penalty of withholding 5% of pension payable to him for a period of two years.

13. Having regard to the nature of charge proved against DGO-6 Sri S.P. Virakthamath, the then Executive Engineer, who is found to have caused wasteful expenditure to the tune of Rs.14,526/-, by recommending the recovery of the said amount out of his salary and other allowances, it is further recommended that he shall be

imposed with penalty of withholding two annual increments with cumulative effect.

14. Action taken in the matter shall be intimated to this Authority.

Connected records are enclosed herewith.

1.2.21

**(JUSTICE B.S.PATIL)**
Upalokayukta-1,
State of Karnataka,
Bengaluru

## ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್-1/ಡಿಇ/1092/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 27.01.2021.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್**.ಸಿ, ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1) ಶ್ರೀ **ಖಾಜಾ ಸುಬ್ರುದ್ದೀನ್,** ಹಿಂದಿನ ಕಿರಿಯ ಅಭಿಯಂತರರು (ಪಿಆರ್‌ಡಿ) ಪುರಸಭೆ, ವಾಡಿ, ಪ್ರಸ್ತುತ ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಕಲಬುರಗಿ (2) **ಶ್ರೀ ಸಿದ್ದಪ್ಪ ಸೋಮಾಪುರ,** ಹಿಂದಿನ ಕಿರಿಯ ಅಭಿಯಂತರರು, ಪ್ರಸ್ತುತ ಪುರಸಭೆ, ಶಹಾಬಾದ್, (3) **ಶ್ರೀ ರಮೇಶ್ ಪತ್ತೇದಾರ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವಾಡಿ (4) **ಶ್ರೀ ಕುಮಾರ ನಾಯಕ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ನಂಜನಗೂಡು (5) **ಶ್ರೀ ಅಶೋಕ ಆರ್. ಕಲಾಲ,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪ್ರಸ್ತುತ ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಮತ್ತು (6) **ಶ್ರೀ ಎಸ್.ಪಿ ವಿರಕ್ತಿಮಠ,** ಹಿಂದಿನ ಕಾರ್ಯಪಾಲಕ ಅಭಿಯಂತರರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ ರವರುಗಳ ವಿರುದ್ದದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1635/2012/ಡಿಆರ್‌ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 29/11/2018.
2. ಸರ್ಕಾರಿ ಆದೇಶ ಸಂಖ್ಯೆ: ನಅಇ 95 ಡಿಎಂಕೆ 2016, ಬೆಂಗಳೂರು ದಿನಾಂಕ: 28/09/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/1092/2017, ಬೆಂಗಳೂರು ದಿನಾಂಕ: 13/11/2017.
4. O.M. No.Uplok-1 & 2/DE/Transfers/ 2019, dated 07/02/2019.

* * * *

1. ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ನಡವಳಿ ಸಂಖ್ಯೆ ನಅಇ 95 ಡಿಎಂಕೆ 2016, ಬೆಂಗಳೂರು ದಿನಾಂಕ 28.09.2017 ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ–1 ರವರ ನಾಮನಿರ್ದೇಶನ ಆದೇಶ ಸಂಖ್ಯೆ ಉಪಲೋಕ್–1/ಡಿಇ/1092/2017 ಬೆಂಗಳೂರು ದಿನಾಂಕ 13.11.2017 ರಂತೆ ಆ.ಸ.ನೌ–1) ಶ್ರೀ **ಖಾಜಾ ಸುಬ್ರದ್ದೀನ್,** ಹಿಂದಿನ ಕಿರಿಯ ಅಭಿಯಂತರರು (ಪಿಆರ್‌ಡಿ) ಪುರಸಭೆ, ವಾಡಿ, ಪ್ರಸ್ತುತ ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಕಲಬುರಗಿ (2) ಶ್ರೀ **ಸಿದ್ದಪ್ಪ ಸೋಮಾಪುರ,** ಹಿಂದಿನ ಕಿರಿಯ ಅಭಿಯಂತರರು, ಪ್ರಸ್ತುತ ಪುರಸಭೆ, ಶಹಾಬಾದ್, (3) ಶ್ರೀ **ರಮೇಶ್ ಪತ್ತೇದಾರ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವಾಡಿ (4) ಶ್ರೀ **ಕುಮಾರ ನಾಯಕ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ನಂಜನಗೂಡು (5) ಶ್ರೀ **ಅಶೋಕ ಆರ್. ಕಲಾಲ,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪ್ರಸ್ತುತ ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಮತ್ತು (6) ಶ್ರೀ **ಎಸ್.ಪಿ ವಿರಕ್ತಿಮಠ,** ಹಿಂದಿನ ಕಾರ್ಯಪಾಲಕ ಅಭಿಯಂತರರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ ( **ಇನ್ನು ಮುಂದೆ ಕ್ರಮವಾಗಿ ಆಪಾದಿತ ಸರ್ಕಾರಿ ನೌಕರ–1 ರಿಂದ 6 ಎಂದು ಸಂಬೋದಿಸಲ್ಪಡುವರು** ) ರವರುಗಳ ವಿರುದ್ಧ ದೋಷರೋಪಣೆ ಸಿದ್ದಪಡಿಸಿ ಜಾರಿಗೊಳಿಸಿ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಅದರಂತೆ ಶ್ರೀ ವಿ.ಜಿ. ಬೋಪಯ್ಯ, ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಮಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ್ದು, ಅದರಂತೆ ಸದರಿಯವರು ಆಪಾದಿತ ಸರ್ಕಾರಿ ನೌಕರ–1 ರಿಂದ 6 ರವರೆಗಿನ ವಿರುದ್ಧ **ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿರುತ್ತಾರೆ:–**

## ಅನುಬಂಧ–1

## ದೋಷಾರೋಪಣೆ

ಒಂದನೆಯ ಆಪಾದಿತ ಸರ್ಕಾರಿ ನೌಕರರಾದ **ಖಾಜಾ ಸಬ್ರುದ್ದೀನ್** ಆದ ನೀವು ವಾಡಿಯ ಪುರಸಭೆಯಲ್ಲಿ ಕಿರಿಯ ಅಭಿಯಂತರರಾಗಿ, ಎರಡನೆಯ ಆಪಾದಿತ ಸರ್ಕಾರಿ ನೌಕರ **ಸಿದ್ದಪ್ಪ ಸೋಮಪುರ** ಆದ ನೀವು ಕಿರಿಯ ಅಭಿಯಂತರರಾಗಿ, ಮೂರನೆಯ ಆಪಾದಿತ ಸರ್ಕಾರಿ ನೌಕರ **ರಮೇಶ್ ಪತ್ತೇದಾರ್**ಆದ ನೀವು ವಾಡಿಯ ಪುರಸಭೆಯಲ್ಲಿ ಮುಖ್ಯಾಧಿಕಾರಿ, ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ **ಕುಮಾರ ನಾಯಕರ್** ಆದ ನೀವು ವಾಡಿಯ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ, ಐದನೆಯ ಆಪಾದಿತ ಸರ್ಕಾರಿ ನೌಕರ **ಅಶೋಕ ಆರ್. ಕಲಾಲ** ಆದ ನೀವು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಹಾಗೂ ಆರನೆಯ ಆಪಾದಿತ ಸರ್ಕಾರಿ ನೌಕರ **ಎಸ್.ಪಿ. ವಿರಕ್ತಿಮಠ** ಆದ ನೀವು ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವದಿಯಲ್ಲಿ ವಾಡಿ ಪಟ್ಟಣದಲ್ಲಿರವ ಉಡುಪಿ ಹೋಟೆಲ್ ಎಂಬಲ್ಲಿಂದ ರೈಲ್ವೆ ಮೇಲುಸೇತುವೆ ವರೆಗೆ ಇರುವ ಮುಖ್ಯ ಚರಂಡಿ ಕಾಮಗಾರಿಯಲ್ಲಿ ಸರಪಳಿ 0.00 ಮೀಟರ್‌ನಿಂದ 750 ಮೇಟರ್ ತನಕ ರೂ. 48,492/– ವೆಚ್ಚವಾಗಿದ್ದು ಹಾಗೂ ಡಾ: ಬಿ.ಆರ್. ಅಂಬೇಡ್ಕರ್ ಚೌಕ್ ಎಂಬಲ್ಲಿಂದ ಎಂ.ಜಿ. ಚೌಕ ಮುಖಾಂತರ ಶಿವಾಜಿ ಚೌಕ ತನಕ ಕಾಂಕ್ರೀಟ್ ಚರಮಡಿ ಕಾಮಗಾರಿಗೆ ರೂ. 24,141/– ವೆಚ್ಚವಾಗಿದ್ದು ಆ ಚರಂಡಿಯ ಬೆಡ್ ಕಾಂಕ್ರೀಟ್‌ನ ನಿರ್ವಹಣೆ ಸಮರ್ಪಕವಾಗಿಲ್ಲದಿದ್ದು ಸದರಿ ಅಸಮರ್ಪಕ ಕಾಮಗಾರಿಗಳಿಗೆಬಿಲ್ ಹಣ ಪಾವತಿಯಾಗಿದ್ದು ಒಟ್ಟೂ ರೂ. 72,633/–

ಗಳು ವ್ಯರ್ಥವಾಗಿ ವೆಚ್ಚವಾಗಿದ್ದು ಸದರಿ ಆರ್ಥಿಕ ನಷ್ಟಕ್ಕೆ ನೀವುಗಳು ಹೊಣೆಗಾರರಾಗಿದ್ದು, ನೀವುಗಳು ಸರ್ಕಾರಿ ನೌಕರರಿಗೆಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

ದೂರುದಾರರಾದ **ಶ್ರೀ ಸಿದ್ದು ಬಿ. ಪಂಚಲಾ,** ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ವಾಡಿ ವಲಯ, ಚಿತ್ತಾಪುರ, ಕಲಬುರಗಿ ರವರು ( **ಇನ್ನು ಮುಂದೆ ದೂರುದಾರರು ಎಂದು ಸಂಭೋದಿಸಲ್ಪಡುವರು** ) ತಮ್ಮ ದೂರಿನಲ್ಲಿ 2005-06ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ 245 ಫಲಾನುಭವಿಗಳನ್ನು ಗುರುತಿಸಿದ್ದು, ಸದರಿ ಫಲಾನುಭವಿಗಳಲ್ಲಿ ಆರ್ಥಿಕವಾಗಿ ಬಲಾಢ್ಯರಿದ್ದು ಸದರಿಯವರು ಫಲಾನುಭವಿಗಳಾಗಿ ಆಯ್ಕೆ ಹೊಂದಲು ಯಾವುದೇ ಅರ್ಹತೆ ಹೊಂದಿರುವುದಿಲ್ಲವೆಂದೂ, ವಾಜಪೇಯಿ ಗೃಹ ಯೋಜನೆಯಡಿಯಲ್ಲಿ 447 ಫಲಾನುಭವಿಗಳನ್ನು ಗುರುತಿಸಿದ್ದು, ಸದರಿ ಯೋಜನೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳಲ್ಲಿ ವ್ಯಾಪಾರಸ್ಥರು ಮತ್ತು ಸಿರಿವಂತರು ಇರುತ್ತಾರೆಂದು ಮತ್ತು ಒಳಚರಂಡಿ ಕಾಮಗಾರಿಯನ್ನು ರೂಪಾಯಿ ಒಂದು ಕೋಟಿಯಲ್ಲಿ ಕೈಗೊಂಡಿದ್ದು ಅದಕ್ಕೆ ಕಾಂಕ್ರೀಟ್ ಬೆಡ್ ಹಾಕಿರುವುದಿಲ್ಲವೆಂದು ಮತ್ತು ಸದರಿ ಚರಂಡಿಯು ಈಗಾಗಲೇ ಹಾಳಾಗಿರುತ್ತದೆ ಎಂದು ಆರೋಪಿಸಿರುತ್ತಾರೆ.

2. ದೂರುದಾರರು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ-2 ಅಂದರೆ

ತನಿಖಾಧಿಕಾರಿಯವರು ಸ್ಥಳ ತನಿಖೆ ನಡೆಸಿ, ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ

(ಅ) ಚೈನೇಜ್ 240 ರಿಂದ 270 ರವರೆಗೆ ನಿರ್ವಹಿಸಿರುವ ಒಳಚರಂಡಿ ಕಾಮಗಾರಿಗೆ ಹಾಕಿರುವ ಕಾಂಕ್ರೀಟ್ ಬೆಡ್ ತೃಪ್ತಿಕರವಾಗಿರುವುದಿಲ್ಲ.

(ಆ) ಪುರಸಭೆ ವ್ಯಾಪ್ತಿಯಲ್ಲಿ ಬರುವ ಶಿವಾಜಿ ಚೌಕದ ಬಳಿ 40 ಮೀಟರ್ ಚರಂಡಿ ಕಾಮಗಾರಿಯನ್ನು ನಿರ್ವಹಿಸಿದ್ದು ಸದರಿ ಒಳಚರಂಡಿ ಕಾಮಗಾರಿಗೆ ಹಾಕಿರುವ ಕಾಂಕ್ರೀಟ್ ಬೆಡ್ ಸಹ ತೃಪ್ತಿಕರವಾಗಿರುವುದಿಲ್ಲ.

(ಇ) ಮೇಲ್ಕಾಣಿಸಿದ ಎರಡು ಕಾಮಗಾರಿಗಳಿಗೆ ಕ್ರಮವಾಗಿ ರೂ. 48,492/- ಹಾಗೂ ರೂ. 24,141/- ಗಳ ಹಣವನ್ನು ವೆಚ್ಚ ಮಾಡಲಾಗಿರುತ್ತದೆ.

ದೂರುದಾರರ ಆಪಾದನೆಯಲ್ಲಿನ ಅಂಶ, ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿಯ ಮೇಲೆ ಆಪಾದಿತ ಸರ್ಕಾರಿ ನೌಕರರುಗಳು ಸಲ್ಲಿಸಿರುವ ಆಕ್ಷೇಪಣೆಗಳು ಸ್ವೀಕಾರ ಯೋಗ್ಯವಲ್ಲವೆಂದು ಗೌರವಾನ್ವಿತ ಉಪಲೋಕಾಯುಕ್ತ-1 ರವರಿಗೆ ಮೇಲ್ನೋಟಕ್ಕೆ ಕಂಡುಬಂದಿದ್ದು ಆಪಾದಿತ ಸರ್ಕಾರಿ ನೌಕರರುಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ರ ನಿಯಮ 3(1) ರಡಿಯಲ್ಲಿ ದುರ್ವತನೆಯನ್ನಸಗಿರುತ್ತಾರೆಂದು ಕಂಡು ಬಂದಿದ್ದರಿಂದ ಆಪಾದಿತ ಸರ್ಕಾರಿ ನೌ-1 ರಿಂದ 6 ರವರುಗಳ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತ-1 ರವರು ಸರ್ಕಾರಕ್ಕೆ ಉಲ್ಲೇಖ-1 ವರದಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಶಿಫಾರಸ್ಸು ಮಾಡಿದ್ದು, ಅದರಂತೆ ಸರ್ಕಾರವು ಉಲ್ಲೇಖ-2 ರ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಅನುಮತಿ ನೀಡಿದ್ದು, ಅದರಂತೆ ಗೌರವಾನ್ವಿತ ಉಪಲೋಕಾಯುಕ್ತ-1 ರವರು ಉಲ್ಲೇಖ-3 ರ ನಾಮನಿರ್ದೇಶನದಲ್ಲಿ ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಆದೇಶವನ್ನು ಹೊರಡಿಸಿದ್ದು,

ಉಲ್ಲೇಖ–4 ರಂತೆ ಅಪರ ನಿಬಂಧಕರು, ವಿಚಾರಣೆಗಳು–11 ರಿಂದ ಅಪರ ನಿಬಂಧಕರು, ವಿಚಾರಣೆಗಳು–16 ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ.–1 ರಿಂದ 6 ರವರುಗಳಿಗೆ ದಿನಾಂಕ 29.11.2018 ರಂದು ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.–1, 3, 4 ಮತ್ತು 5 ರವರುಗಳ ದಿನಾಂಕ 26.12.2018 ರಂದು ಮತ್ತು ಆ.ಸ.ನೌ 2 ಮತ್ತು 6 ರವರುಗಳು ದಿನಾಂಕ 30.01.2019 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ.–1 ರಿಂದ 6 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಆ.ಸ.ನೌ.–1 ರಿಂದ 6 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.–1 ರಿಂದ 6 ರವರುಗಳು ಪರವಾಗಿ ದಿನಾಂಕ 04/05/2019 ರಂದು ಶ್ರೀ ಸುದೀರ್ ಕುಮಾರ್, ವಕೀಲರು ಜಂಟಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ದೋಷಾರೋಪಣೆಯಲ್ಲಿ ಆಪಾದಿಸಿರುವ ಆರೋಪಗಳು ಸತ್ಯಕ್ಕೆ ದೂರವಾಗಿದ್ದು ಆಪಾದಿತ ಸರ್ಕಾರಿ ನೌಕರ–1 ರಿಂದ 6 ರವರುಗಳು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲ, ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿದ್ದು, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ಆಪಾದಿತ ಸರ್ಕಾರಿ ನೌಕರ–1 ರಿಂದ 6 ರವರುಗಳನ್ನು ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

7) ಈ ವಿಚಾರಣೆಯಲ್ಲಿ, ಆ.ಸ.ನೌ.–1 ರಿಂದ 6 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ಸಿದ್ದುಪಂಚಾಳ ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.1 ರಿಂದ 10 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ ಎಂ. ದೇವಿಪರಸಾದ್, ನಿವೃತ್ತ ಕಾರ್ಯಪಲಕ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 11 ರಿಂದ 18 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ.–1 ರಿಂದ 6 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ತಗೆದುಕೊಳ್ಳಲಾಗಿರುತ್ತದೆ.

8) ಆ.ಸ.ನೌ.–1 ರಿಂದ 6 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–1 ರಿಂದ 6 ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ.–1** ರಿಂದ 3 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

9) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ.–1 ರಿಂದ 6 ರವರುಗಳ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

11) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ಶಿಸ್ತು ಪ್ರಾಧಿಕಾರವು ಆ.ಸ.ನೌ–1 ರಿಂದ 6 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

12) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

14) ಈ ಪ್ರಕರಣದಲ್ಲಿ ಆ.ಸ.ನೌ.–1 ರಿಂದ 6 ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ದೂರುದಾರರಾದ ಶ್ರೀ ಸಿದ್ದುಪಂಚಾಳ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 1 ರಿಂದ 10 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದೂರುದಾರರು ದಿ: 06.05.2012 ರಂದು ಗೌರವಾನ್ವಿತ ಲೋಕಾಯುಕ್ತಕ್ಕೆ ಸಲ್ಲಿಸಿದ ದೂರು ಅರ್ಜಿಯಾಗಿದ್ದು, ನಿ.ಪಿ–2 ದಿನಾಂಕ 06.05.2012 ರ ನಮೂನೆ–1 ದೂರಾಗಿದ್ದು, ನಿ.ಪಿ–3 ನಮೂನೆ–2 ರ ದೂರಿನ ಅರ್ಜಿಯಾಗಿರುತ್ತದೆ. ನಿ.ಪಿ–4 (145 ಹಾಳೆಗಳು) ದೂರಿನೊಂದಿಗೆ ಆರ್.ಟಿ.ಐ. ನಡಿಯಲ್ಲಿ ಪಡೆದ 145 ಪುಟಗಳ ಹಾಳೆಗಳುಳ್ಳ ಜೆರಾಕ್ಸ್ ದಾಖಲೆಗಳಿದ್ದು, ಮತ್ತು ನಿ.ಪಿ–5 (7 ಫೋಟಗಳು) ಕಾಮಗಾರಿಗೆ ಸಂಬಂಧಿಸಿದ ಪೋಟುಗಳು ಇರುತ್ತವೆ. ನಿ.ಪಿ–6, ತನಿಖಾಧಿಕಾರಿ

ದಿನಾಂಕ 22.04.2014 ರಂದು ಸ್ಥಳ ತನಿಖೆ ಮಾಡಿ ಬರೆದ ಮಹಜರ್ ಇರುತ್ತದೆ. ನಿ.ಪಿ–7, ತನಿಖಾಧಿಕಾರಿಯವರು ದಿನಾಂಕ 23/04/2014 ರಂದು ಮಾಡಲಾದ ಮತ್ತೊಂದು ಪಂಚನಾಮೆಯಾಗಿರುತ್ತದೆ. ನಿ.ಪಿ–8 ದೂರುದಾರರು ದಿನಾಂಕ 18.12.2014 ರಂದು ಸಲ್ಲಿಸಿದ ಪ್ರತ್ಯುತ್ತರ, ನಿ.ಪಿ–9 (2 ಹಾಳೆಗಳು) ದೂರುದಾರರ ಪ್ರತ್ಯುತ್ತರದೊಂದಿಗೆ 2 ದಿನಪತ್ರಿಕೆಯಲ್ಲಿ ಪ್ರಕಟವಾದ ದಿನಪತ್ರಿಕೆಯ ಜೆರಾಕ್ಸ್ ಪ್ರತಿ ಮತ್ತು ನಿ.ಪಿ–10 ದೂರುದಾರರು ಸಲ್ಲಿಸಿದ ಸಿ.ಡಿ ಯಾಗಿರುತ್ತದೆ.

15) ಶಿಸ್ತು ಪ್ರಾಧಿಕಾರವು ಮುಂದುವರೆದು ತನಿಖಾಧಿಕಾರಿ ಶ್ರೀ ಎಂ. ದೇವಿ ಪ್ರಸಾದ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 11 ರಿಂದ 18 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ,ಪಿ–11 (14 ಹಾಳೆಗಳು) ದಾಖಲೆಯು ತನಿಖಾ ವರದಿಯಾಗಿದ್ದು, ನಿ.ಪಿ–12 ಕಾಮಗಾರಿಗಳ ವಿವರಗಳ ಪಟ್ಟಿ, ನಿ.ಪಿ–13 ಈ ವಿವಾದಿತ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ಕಲಬುರಗಿ ಜಿಲ್ಲಾಧಿಕಾರಿಗಳು ಒದಗಿಸಿದ ಅನುದಾನದ ಪಟ್ಟಿಯಾಗಿರುತ್ತದೆ. ನಿ.ಪಿ–14 ಈ ವಿವಾದಿತ ಕಾಮಗಾರಿಗಳ ಪೈಕಿ 1ನೇ ಕಾಮಗಾರಿಗೆ ಸಂಬಂಧಪಟ್ಟ ಅಂದಾಜುಪಟ್ಟಿಯ ಪ್ರತಿಯಾಗಿದ್ದು, ನಿ.ಪಿ–15 ಈ ವಿವಾದಿತ ಎರಡು ಕಾಮಗಾರಿಗಳನ್ನು ಕಲಬುರಗಿ ಜಿಲ್ಲಾಧಿಕಾರಿಗಳು ಅನುಮೋದಿಸಿದ ಬಗ್ಗೆ ಹೊರಡಿಸಿದ ಆದೇಶದ ಪ್ರತಿಯಾಗಿರುತ್ತದೆ. ನಿ.ಪಿ–16 (28 ಹಾಳೆಗಳು) ವಿವಾದಿತ 1ನೇ ಕಾಮಗಾರಿಗೆ ಸಂಬಂಧಪಟ್ಟಂತೆ ಬಿಲ್ ಪಾವತಿಸಿದ ಬಗ್ಗೆ ನೀಡಿದ ಬಿಲ್

ಪ್ರತಿಗಳಾಗಿದ್ದು, ನಿ.ಪಿ–17 (25 ಹಾಳೆಗಳು) 2ನೇ ಕಾಮಗಾರಿಗೆ ಸಂಬಂಧಪಟ್ಟಂತೆ ಬಿಲ್ ಪಾವಿತಿಸಿದ ಬಗ್ಗೆ ನೀಡಿದ ಬಿಲ್‌ನ ಪ್ರತಿಗಳಿರುತ್ತವೆ.

ಆ.ಸ.ನೌ.–1 ರಿಂದ 6 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–1 ರಿಂದ 6 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ.–1 ರಿಂದ 3 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಡಿ.–1 ಆ.ಸ.ನೌ–4 ರವರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆಯಾಗಿರುತ್ತದೆ, ನಿ.ಡಿ–2 ಈ ವಿವಾದಿತ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಆ.ಸ.ನೌ–4 ರವರ ಕಛೇರಿಯಲ್ಲಿ ಕಾಯ್ದಿರಿಸಿದ ಕಛೇರಿ ಟಿಪ್ಪಣಿಯ ದಾಖಲೆಗಳಾಗಿದ್ದು, ನಿ.ಡಿ–3 ವಿವಾದಿತ 2ನೇ ಕಾಮಗಾರಿಗೆ ಸಂಬಂಧಪಟ್ಟಂತೆ ಈ ಆ.ಸ.ನೌ–4 ರವರ ಕಛೇರಿಯಲ್ಲಿ ಕಾಯ್ದಿರಿಸಿದ ಕಛೇರಿ ಟಿಪ್ಪಣಿಯ ದಾಖಲೆಯಾಗಿರುತ್ತದೆ.

17) ದೂರುದಾರರಾದ **ಶ್ರೀ ಸಿದ್ದು ಪಂಚಾಳ** ರವರು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ

**“ ಒಳಚರಂಡಿ ಕಾಮಗಾರಿಯ ಅಂದಾಜು ವೆಚ್ಚ 1.00 ಕೋಟಿ ಆಗಿದ್ದು, ಆದರೆ, ಅದು ಕಾಮಗಾರಿಯಾಗಿ ಒಂದು ವರ್ಷದೊಳಗೆ ಬಿದ್ದು ಹೋಗುತ್ತಿತ್ತು. ಅದು ಕಳಪೆ ಕಾಮಗಾರಿಯಾಗಿದ್ದರಿಂದ ಈ ಬಗ್ಗೆಯೂ ಸಹ ದೂರಿನಲ್ಲಿ ಹೇಳಿರುತ್ತೇನೆ ”.**

**“ ಲೋಕಾಯುಕ್ತ ಸಂಸ್ಥೆಯಿಂದ ತನಿಖಾಧಿಕಾರಿಗಳು ಸ್ಥಳಕ್ಕೆ ಬಂದಿದ್ದು, ತನಿಖೆ ಮಾಡಿ ನನ್ನ ಸಮಕ್ಷಮದಲ್ಲಿಯೇ ಮಹಜರ್ ಬರೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ್ದರಿಮದ ( ದಿನಾಂಕ 22/04/2014 ರ ಪಂಚನಾಮೆ ) ಅದನ್ನು ನಿ.ಪಿ–6 ಎಂದು**

**ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ.ಪಿ 3(ಎ) ಎಂದು ಗುರುತಿಸಲಾಯಿತು. ದಿನಾಂಕ 23/04/2014 ರಂದು ಮಾಡಲಾದ ಮತ್ತೊಂದು ಪಂಚನಾಮೆಯನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿ.ಪಿ–7 ಎಂದು ಸಾಕ್ಷಿ ಸಹಿಯನ್ನು ನಿ.ಪಿ.–7(ಎ) ಎಂದು ಗುರುತಿಸಲಾಯಿತು ".**

ಈ ರೀತಿ ನುಡಿದಿದ್ದು, ತಾನು ಸಲ್ಲಿಸಿದ ನಿ.ಪಿ–1 ರಿಂದ 4 ದೂರಿನಲ್ಲಿನ ಸಂಗತಿ ಮತ್ತು ಆಪಾದನೆಗೆ ಪೂರಕವಾಗುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಲೋಕಾಯುಕ್ತ ಸಂಸ್ಥೆ ತನಿಖಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಈ ವಿವಾದಿತ ಕಾಮಗಾರಿಗಳನ್ನು ಪರಿಶೀಲಿಸಿದ ಬಗ್ಗೆ ಸ್ಪಷ್ಟವಾಗಿ ನುಡಿದಿರುತ್ತಾರೆ. ಮುಂದುವರೆದು, ಆ.ಸ.ನೌ ಪರ ವಕೀಲರು ಈ ವಿವಾದಿತ ಕಾಮಗಾರಿಯಾದ ಚರಂಡಿ ಕಾಮಗಾರಿಯು ವಾಹನಗಳ ಓಡಾಟದಿಂದ ಧಕ್ಕೆಯಾಗಿರುತ್ತದೆಂದು ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ. ಅಲ್ಲದೆ, ಈ ಒಳಚರಂಡಿ ಕಾಮಗಾರಿಯ ತಡೆಗೋಡೆ ಯಾವ ಕಾರಣಕ್ಕೆ ವಾಲಿರುತ್ತದೆಂದು ತನಿಖಾಧಿಕಾರಿ ಆ ಸಮಯದಲ್ಲಿ ಈ ದೂರುದಾರರಿಗೆ ತಿಳಿಸಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ.

ಈ ಅಂಶವನ್ನು ಪರಿಶೀಲಿಸಿದಾಗ ದೂರುದಾರರು ಲೋಕಾಯುಕ್ತ ತನಿಖಾಧಿಕಾರಿ ಸ್ಥಳಕ್ಕೆ ಬಂದು ಈ ವಿವಾದಿತ ಕಾಮಗಾರಿಯನ್ನು ಪರಿಶೀಲಿಸಿರುವುದು ಮತ್ತು ಆ ಸಮಯದಲ್ಲಿ ಈ ಒಳಚರಂಡಿಗೆ ನಿರ್ಮಿಸಲಾದ ತಡೆಗೋಡೆ ವಾಲಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಮುಂದುವರೆದು, ಈ ದೂರುದಾರರ ಸಮಕ್ಷಮದಲ್ಲಿಯೇ ನಿ.ಪಿ–6 ಮತ್ತು 7 ಪಂಚನಾಮೆಗಳನ್ನು ತನಿಖಾಧಿಕಾರಿ ಬರೆದಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. ಮುಂದುವರೆದು, ನಿ.ಪಿ–9 ದಿನ ಪತ್ರಿಕೆಗಳಲ್ಲಿ ಪ್ರಕಟವಾದ ಈ ವಿವಾದಿತ ಕಾಮಗಾರಿಗಳ ಅವ್ಯವಸ್ಥೆಯ ಬಗ್ಗೆ ಮತ್ತು ಅವುಗಳು ಈ ವಿವಾದಿತ ಕಾಮಗಾರಿಗಳಿಗೆ

ಯಾವುದೆ ಸಂಬಂಧ ಇರುವುದಿಲ್ಲ ಎಂದು ಸೂಚಿಸಿದ್ದನ್ನು ದೂರುದಾರರು/ಪಿಡಬ್ಲ್ಯೂ–1 ಪಾಟೀಓ ಸವಾಲಿನಲ್ಲಿ ನಿರಾಕರಿಸಿರುತ್ತಾರೆ. ನಿ.ಪಿ–9 ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಪರಿಶೀಲಿಸಿದಾಗ ಈ ವಿವಾದಿತ ಚರಂಡಿ ಗೋಡೆಯ ಅವ್ಯವಸ್ಥೆ ಬಗ್ಗೆ ಪ್ರಕಟಿಸಿರುವುದು ಕಂಡುಬರುತ್ತದೆ. ದೂರುದಾರರು ಈ ವಿವಾದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳಲ್ಲಿನ ಲೋಪದೋಷಗಳ ಬಗ್ಗೆ ನೀಡಿರುವ ನಿ.ಪಿ–5 ರಲ್ಲಿನ ಪೋಟೋಗಳು ಮತ್ತು ತನಿಖಾಧಿಕಾರಿ ಸಲ್ಲಿಸಿದ ನಿ.ಪಿ–6 ಮತ್ತು 7 ಪಂಚನಾಮೆಗಳಲ್ಲಿ ಬರೆದಿರುವುದು ಸ್ಪಷ್ಟವಾಗುತ್ತದೆ. ಈ ಎರಡು ಕಾಮಗಾರಿಗಳು ನ್ಯೂನ್ಯತೆಯಿಂದ ಕೂಡಿರುತ್ತದೆಂದು ತನಿಖಾಧಿಕಾರಿ ಪಂಚನಾಮೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

ಶಿಸ್ತು ಪ್ರಾಧಿಕಾರವು ಈ ಆ.ಸ.ನೌ ರವರುಗಳ ಮೇಲೆ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲು ಈ ಲೋಕಾಯುಕ್ತ ಸಂಸ್ಥೆಯ ತನಿಖಾಧಿಕಾರಿಯಾದ ಪಿ.ಡಬ್ಲ್ಯೂ–2/ಶ್ರೀ ಎಂ.ದೇವಿಪ್ರಸಾದ್, ನಿವೃತ್ತ ಕಾರ್ಯಪಾಲಕ ಅಭಿಯಂತರರು ರವರನ್ನು ಸಾಕ್ಷ್ಯ ನುಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ:–

**" ಐದು ಕಾಮಗಾರಿಗಳ ಪೈಕಿ ಎರಡು ಕಾಮಗಾರಿಗಳಲ್ಲಿ ನ್ಯೂನ್ಯತೆ ಕಂಡುಬಂದಿರುತ್ತದೆ ".**

1) ವಾಡಿ ಪಟ್ಟಣದ ಉಡುಪಿ ಹೋಟೆಲ್‌ನಿಂದ ರೈಲ್ವೆ ಮೇಲ್‌ಸೇತುವೆ ವರಗಿನ ಮುಖ್ಯ ಸಿ.ಸಿ. ಚರಂಡಿಯ ನಿರ್ಮಾಣ ಕಾಮಗಾರಿ (ಸರಪಳಿ 0.00 ಮೀಟರ್‌ನಿಂದ 750.00 ಮೀಟರ್ ವರೆಗೆ).

2) ವಾಡಿ ಪಟ್ಟಣದಲ್ಲಿ ಡಾ. ಅಂಬೇಡ್ಕರ್ ಚೌಕನಿಂದ ಶಿವಾಜಿ ಚೌಕ್ (ವಯಾ ಎಂ.ಜಿ. ಚೌಕ್) ವರೆಗೆ ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ.

ಈ ಮೇಲ್ಕಂಡ ಎರಡೂ ಕಾಮಗಾರಿಗಳನ್ನು ಕಲಬುರಗಿ ಜಿಲ್ಲಾಧಿಕಾರಿಗಳು ಅನುಮೋದಿಸಿರುವುದಾಗಿ ಆ ಬಗ್ಗೆ ಅಂದಾಜುಪಟ್ಟಿಯನ್ನು ನಿ.ಪಿ–14 ಎಂದು ಮತ್ತು ಅನುಮೋದಿಸಿದ ಆದೇಶದ ಪ್ರತಿಯನ್ನು ನಿ.ಪಿ–15 ಎಂದು ಗುರುತಿಸಿರುತ್ತಾರೆ. ತಾನು ತಯಾರಿಸಿದ ಪಂಚಾನಾಮೆ ನಿ.ಪಿ–6 ಮತ್ತು 7 ಇರುವುದಾಗಿ ನುಡಿದಿರುತ್ತಾರೆ. ಈ ಸಾಕ್ಷಿ ಸಹಿಯನ್ನು ನಿ.ಪಿ–6(ಸಿ) ಮತ್ತು 7(ಸಿ) ಎಂದು ಮಂಡನಾಧಿಕಾರಿಗಳು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು, ಈ ಎರಡೂ ಕಾಮಗಾರಿಗಳು ಟೆಂಡರ್ ಮುಖಾಂತರವೆ ಮಾಡಿರುವುದಾಗಿ ಆ ಬಗ್ಗೆ ಕಾಮಗಾರಿಗಳ ಅಳತೆ ಪುಸ್ತಕಗಳು ಕಾಯ್ದಿರಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ಈ ಎರಡೂ ಕಾಮಗಾರಿಗಳು ನ್ಯೂನ್ಯತೆಯುಳ್ಳ ಕಾಮಗಾರಿಗಳೆಂದು ತಾನು ಸಲ್ಲಿಸಿದ ನಿ.ಪಿ–11 ರ ವರದಿಯಲ್ಲಿ ಉಲ್ಲೇಖಿಸಿರುವುದಾಗಿ ನುಡಿದಿರುತ್ತಾರೆ. ಈ ನ್ಯೂನ್ಯತೆಯುಳ್ಳ ಕಾಮಗಾರಿಗಳಿಂದ ಸರ್ಕಾರಕ್ಕೆ ಒಟ್ಟಾರೆ ರೂ. 72,633/– ಗಳು ನಷ್ಟವಾಗಿರುತ್ತದೆಂದು ಮತ್ತು ಈ ಬಗ್ಗೆ ತಾನು ಸಲ್ಲಿಸಿದ ವರದಿ ನಿ.ಪಿ–11 ರಲ್ಲಿ ಉಲ್ಲೇಖಿಸಿರುವುದಾಗಿ ನುಡಿದಿರುತ್ತಾರೆ.

1ನೇ ಕಾಮಗಾರಿಯಲ್ಲಿನ ನ್ಯೂನ್ಯತೆಯ ಬಗ್ಗೆ ತನಿಖಾಧಿಕಾರಿ/ಪಿಡಬ್ಲ್ಯೂ–2 ರವರು ಈ ಕೆಳಕಂಡಂತೆ ನುಡಿದಿರುತ್ತಾರೆ:

**" ಸದರಿ ಚರಂಡಿಯ 240 ಮೀ. ನಿಂದ 270 ಮೀಟರ್ ವರೆಗಿನ ಭಾಗದಲ್ಲಿ ಮತ್ತು ಶಿವಾಜಿ ಚೌಕ್‌ನ ಬಳಿ 40 ಮೀ. ಉದ್ದದ ಚರಂಡಿಯ ಭಾಗದಲ್ಲಿ9 ಬೆಡ್ ಕಾಂಕ್ರೀಟ್‌ನಲ್ಲಿ ಹಾಕಿರುವ ಕಂಬಿಗಳು ಎದ್ದುಕಾಣಿಸುತ್ತಿದ್ದವು. ಅಲ್ಲದೆ, ಸರಪಳಿ 240 ಮೀ. ನಿಂದ 270 ಮೀ. ವರೆಗಿನ ಭಾಗದಲ್ಲಿ ಸೆಂಟರಿಂಗ್ ಹಾಗೂ ಸೆಂಟರಿಂಗ್‌ಗೆ ಸರಿಯಾದ ಸಪೋರ್ಟ್ ಇಲ್ಲದೆ ಚರಂಡಿಯ ಗೋಡೆಗಳು ವಾಲಿಒರುವುದನ್ನು ಗಮನಿಸಲಾಯಿತು. ಈ ಭಾಗದ ಕಾಮಗಾರಿಗಳಿಗೂ ಬಿಲ್ ತಯಾರಿಸಿ ಹಣ ಪಾವತಿಸಿರುವುದು ಕಂಡುಬಂದ ಕಾರಣ, ಆ ಭಾಗದ ಕಾಮಗಾರಿ ವೆಚ್ಚವನ್ನು ವ್ಯರ್ಥವೆಚ್ಚವೆಂದು ಪರಿಗಣಿಸಲಾಯಿತು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ರೂ. 48,492/– ಗಳ ಹಣ ನಷ್ಟವಾಗಿರುವುದು ಕಂಡು ಬಂದಿರುತ್ತದೆ ".**

2ನೇ ಕಾಮಗಾರಿಯಲ್ಲಿನ ನ್ಯೂನ್ಯತೆಯ ಬಗ್ಗೆ ತನಿಖಾಧಿಕಾರಿ/ಪಿಡಬ್ಲ್ಯೂ–2 ರವರು ಈ ಕೆಳಕಂಡಂತೆ ನುಡಿದಿರುತ್ತಾರೆ:

**" ಈ ಚರಂಡಿ ಕಾಮಗಾರಿಯು ಶಿವಾಜಿ ಚೌಕ್‌ನಿಂದ ಬಾಲಾಜಿ ಲಾಡ್ಜ್‌ವರೆಗಿನ ಜಾಗದಲ್ಲಿ ಒಟ್ಟು 85 ಮೀ. ಉದ್ದದ ಚರಂಡಿಯಲ್ಲಿ ಬೆಡ್ ಕಾಂಕ್ರೀಟ್ ಹಾಳಾಗಿರುವುದನ್ನು ಗಮನಿಸಲಾಗಿದೆ. ಈ ಭಾಗದ ಕಾಮಗಾರಿಗೂ ಸಹ ಬಿಲ್ ಪಾವತಿಸಿರುವುದರಿಂದ, ಸದರಿ ವೆಚ್ಚವನ್ನು ವ್ಯರ್ಥವೆಚ್ಚವೆಮದು ಪರಿಗಣಿಸಲಾಯಿತು. ರೂ. 24,141/- ಗಳು ವ್ಯರ್ಥ ವೆಚ್ಚವೆಂದು ಕಂಡುಬಂದಿರುತ್ತದೆ ".**

ಈ ರೀತಿ ತನಿಖಾಧಿಕಾರಿ ಸ್ಪಷ್ಟವಾಗಿ ಪರಿಶೀಲಿಸಿರುವುದನ್ನು ಪರಿಶೀಲಿಸಿದಾಗ ಈ ವಿವಾದಿತ ಎರಡೂ ಕಾಮಗಾರಿಗಳಲ್ಲಿ ಲೋಪವಿದ್ದಿರುವುದು ಕಂಡುಬರುತ್ತದೆ. ಈ ತನಿಖಾಧಿಕಾರಿಗೆ ಆ.ಸ.ನೌ ಪರ ವಕೀಲರು ಬೇರೆ ಕಾರಣಗಳಿಂದ ಲೋಪವಾಗಿರುತ್ತದೆ ಎಂದು ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ. ಈ ಕಾಮಗಾರಿಗಳಲ್ಲಿನ ಲೋಪದೋಷಕ್ಕೆ ಸಂಬಂಧಿಸಿದಂತೆ ಈ ಆ.ಸ.ನೌ ರವರುಗಳು ಗುತ್ತಿಗೆದಾರನಿಗೆ ಸಂಪೂರ್ಣ ಬಿಲ್ ಪಾವತಿಸುವಲ್ಲಿ ಸಹಕರಿಸಿರುವುದರಿಂದ ಇವರುಗಳೆಲ್ಲರೂ ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟಂತೆ ಶೇಕಡವಾರು ಪ್ರಮಾಣದಲ್ಲಿ ಹೊಣೆಗಾರರೆಂದು ತನಿಖಾಧಿಕಾರಿಯವರು ತಾನು ಸಲ್ಲಿಸಿದ ನಿ.ಪಿ-11 ರ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಅಲ್ಲದೆ, ಈ ಆ.ಸ.ನೌ ರವರುಗಳು ಈ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಂಡಿರುವುದಿಲ್ಲವೆಂದು ಹಾಗೂ ಈ ವಿಳಂಭಕ್ಕೆ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ತನಿಖಾ ವರದಿಯಲ್ಲಿ ಅಭಿಪ್ರಾಯಿಸಿರುತ್ತಾರೆ. ಈ ವಿವಾದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಯಾವ ಯಾವ ಅಧಿಕಾರಿಗಳು/ಆ.ಸ.ನೌ ರವರುಗಳು ಎಷ್ಟು ಮೊತ್ತಕ್ಕೆ ಹೊಣೆಗಾರರೆಂದು ತನಿಖಾ ವರದಿಯಲ್ಲಿನ ಕೊನೆಯಲ್ಲಿ ಅಭಿಪ್ರಾಯ ನೀಡಿರುತ್ತಾರೆ. **ಆ ಪ್ರಕಾರ ಆ.ಸ.ನೌ-1 (ಶ್ರೀ ಖಾಜಾ ಸುಬ್ರದ್ದೀನ್,) ರವರು ರೂ. 4,829, ಆ.ಸ.ನೌ-2 ಶ್ರೀ ಸಿದ್ದಪ್ಪ ಸೋಮಾಪುರ) ರೂ. 9,700, ಆ.ಸ.ನೌ-3 (ಶ್ರೀ ರಮೇಶ್ ಪಟ್ಟೇದಾರ್) ರೂ. 14,526, ಆ,ಸ.ನೌ-4 (ಶ್ರೀ ಕುಮಾರ್ ನಾಯಕ್) ರೂ. 14,526, ಆ.ಸ.ನೌ-5 (ಶ್ರೀ ಆಶೋಕ್ ಆರ್. ಕಲಾಲ) ರೂ. 14,526 ಮತ್ತು ಆ.ಸ.ನೌ-6 (ಎಸ್.ಪಿ ವಿರಕ್ತ ಮಠ್) ರೂ. 14,526/- ಒಟ್ಟು ರೂ. 72,636/- ಗಳ ವ್ಯರ್ಥ ವೆಚ್ಚಕ್ಕೆ ಕಾರಣಕರ್ತರೆಂದು ಉಲ್ಲೇಖಿಸಿರುತ್ತಾರೆ.**

ಈ ಅಂಶವನ್ನು ಪರಿಶೀಲಿಸಿದಾಗ ಈ ಆ.ಸ.ನೌ–1 ರಿಂದ 6 ರವರುಗಳ ಮೇಲೆ ಹೊರಿಸಲಾದ ಆರೋಪವನ್ನು ಶಿಸ್ತು ಪ್ರಾಧಿಕಾರವು ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಮುಖಾಂತರ ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತದೆ.

28) ಆ.ಸ.ನೌ–1 ರಿಂದ 6 ರವರು ಡಿಡಬ್ಲ್ಯೂ–1 ರಿಂದ 6 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಾಕ್ಷ್ಯ ನುಡಿದಿರುತ್ತಾರೆ. ಆ.ಸ.ನೌ–4 ರವರು ನಿ.ಡಿ.–1 ರಿಂದ 3 ದಾಖಲೆಗಳನ್ನು ಗುರುತಿಸಿಕೊಂಡಿದ್ದು ಇವುಗಳು ಈ ಆ.ಸ.ನೌ ರವರುಗಳ ಮೇಲೆ ರಚಿಸಿರುವ ಆರೋಪವನ್ನು ಅಲ್ಲಗಳೆಯಲು ಸಹಕಾರಿಯಾಗಿರುವುದಿಲ್ಲ. ಆ.ಸ.ನೌ–4 ರವರು ತಮ್ಮ ಪಾಟೀ ಸವಾಲಿನಲ್ಲಿ ಲೋಕಾಯುಕ್ತ ತನಿಖಾಧಿಕಾರಿ ಸಲ್ಲಿಸಿದ ನಿ.ಪಿ–11 ವರದಿಯಲ್ಲಿ ತಾನು ಮತ್ತು ಉಳಿದ ಆ.ಸ.ನೌ ರವರುಗಳು ಈ ವ್ಯರ್ಥವೆಚ್ಚಕ್ಕೆ ಜವಬ್ದಾರರೆಂದು ಹೇಳಿರುತ್ತಾರೆಂಬುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಆ.ಸ.ನೌ ರವರುಗಳು ಭಾಗಶ ಮಾತ್ರ ಬಿಲ್ ಹಣ ಪಾವತಿಯಾಗಲು ಸಹಕರಿಸಿರುವುದಾಗಿ ಹೇಳಿರುತ್ತಾರೆ, ಆದರೆ ತಾವು ಎಷ್ಟು ಭಾಗಕ್ಕೆ ಭಾದ್ಯಸ್ಥರೆಂದು ತೋರಿಸಲು ಯಾವುದೇ ಅಧಿಕೃತ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ. ಈ ಎಲ್ಲಾ ಆ.ಸ.ನೌ ರವರುಗಳು ನಿ.ಪಿ–11 ತನಿಖಾ ವರದಿಯಲ್ಲಿನ ಅಂಶವನ್ನು ಒಪ್ಪಿಕೊಂಡಿರುತ್ತಾರೆ. ತನಿಖಾಧಿಕಾರಿ/ಪಿಡಬ್ಲ್ಯೂ–2 ರವರ ಮೌಖಿಕ ಸಾಕ್ಷ್ಯ ಮತ್ತು ನಿ.ಪಿ–11 ತನಿಖಾ ವರದಿಯು ಈ ಆ.ಸ.ನೌ ರವರುಗಳ ಮೇಲೆ ರಚಿಸಲಾದ ಆರೋಪವನ್ನು ರುಜುವಾತುಪಡಿಸುತ್ತದೆ.

30) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ.–1 ರಿಂದ 6 ರವರುಗಳ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ

ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ.-1 ರಿಂದ 6 ರವರುಗಳು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆ.ಸ.ನೌ-1 ಶ್ರೀ **ಖಾಜಾ ಸುಬ್ರುದ್ದೀನ್,** ಹಿಂದಿನ ಕಿರಿಯ ಅಭಿಯಂತರರು (ಪಿಆರ್‌ಡಿ) ಪುರಸಭೆ, ವಾಡಿ, ಪ್ರಸ್ತುತ ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಕಲಬುರಗಿ, ಆ.ಸ.ನೌ-2 **ಶ್ರೀ ಸಿದ್ದಪ್ಪ ಸೋಮಾಪುರ,** ಹಿಂದಿನ ಕಿರಿಯ ಅಭಿಯಂತರರು, ಪ್ರಸ್ತುತ ಪುರಸಭೆ, ಶಹಾಬಾದ್, ಆ.ಸ.ನೌ-3 ಶ್ರೀ **ರಮೇಶ್ ಪತ್ತೇದಾರ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ವಾಡಿ, ಆ.ಸ.ನೌ-4 ಶ್ರೀ **ಕುಮಾರ ನಾಯಕ್,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ನಂಜನಗೂಡು, ಆ.ಸ.ನೌ-5 ಶ್ರೀ **ಆಶೋಕ ಆರ್. ಕಲಾಲ,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪ್ರಸ್ತುತ ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಮತ್ತು ಆ.ಸ.ನೌ-6 ಶ್ರೀ **ಎಸ್.ಪಿ ವಿರಕ್ತಿಮಠ,** ಹಿಂದಿನ ಕಾರ್ಯಪಾಲಕ ಅಭಿಯಂತರರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ ರವರುಗಳ ವಿರುದ್ಧದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ

ಆಪಾದಿತ ಸರ್ಕಾರಿ ನೌಕರ-1 ರಿಂದ 6 ರವರುಗಳಿಂದ ವ್ಯರ್ಥವೆಚ್ಚವಾಗಿರುವ ಪೈಕಿ, ಆ.ಸ.ನೌ-1 (ಶ್ರೀ ಖಾಜಾ ಸುಬ್ರುದ್ದೀನ್,) ರವರಿಂದ ರೂ. 4,829, ಆ.ಸ.ನೌ-2 ಶ್ರೀ ಸಿದ್ದಪ್ಪ

ಸೋಮಾಪುರ) ರವರಿಂದ ರೂ. 9,700/-, ಆ.ಸ.ನೌ-3 (ಶ್ರೀ ರಮೇಶ್ ಪಟ್ಟೇದಾರ್) ರವರಿಂದ ರೂ. 14,526, ಆ,ಸ.ನೌ-4 (ಶ್ರೀ ಕುಮಾರ್ ನಾಯಕ್) ರವರಿಂದ ರೂ. 14,526, ಆ.ಸ.ನೌ-5 (ಶ್ರೀ ಆಶೋಕ್ ಆರ್. ಕಲಾಲ) ರವರಿಂದ ರೂ. 14,526 ಮತ್ತು ಆ.ಸ.ನೌ-6 (ಎಸ್.ಪಿ ವಿರಕ್ತ ಮಠ್) ರವರಿಂದ ರೂ. 14,526/- ಒಟ್ಟು ರೂ. 72,636/- ಗಳನ್ನು ವಸೂಲು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**27ನೇ ಜನವರಿ 2021.**

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.